# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 652 (782) |
| ಸದಸ್ಯರ ಹೆಸರು | : | ಶ್ರೀ. ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>(ಅ)</td><td>UKP ಯಲ್ಲಿ ಭೂಮಿ ಕಳೆದುಕೊಂಡ ರೈತ ಪರಿಹಾರ ಪಡೆದ ಹಣದಲ್ಲಿ ಬೇರೆ ಕಡೆ ಅಷ್ಟೇ ಪ್ರಮಾಣದ ಜಮೀನು ಖರೀದಿಸಲು ಇಂದಿನ ದಿನಗಳಲ್ಲಿ ಸಾಧ್ಯವಿದೆಯೇ: ಈ ದರ ನಿಗದಿಗೆ ಸರ್ಕಾರ ಅನುಸರಿಸಿದ ಮಾನದಂಡಗಳೇನು:</td><td rowspan="4">UKP ಯೋಜನಾ ಅನುಷ್ಠಾನಕ್ಕೆ ಅವಶ್ಯವಿರುವ ಜಮೀನಿಗೆ ನ್ಯಾಯಯುತವಾದ ಭೂಮಿ ಬೆಲೆ ನಿರ್ಧರಿಸುವ ಕುರಿತು ದಿನಾಂಕ 16.12.2024ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಮತ್ತು ಉಪ ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯ ಜನ ಪ್ರತಿನಿಧಿಗಳು ಹಾಗೂ ಯೋಜನಾ ಬಾಧಿತ ಸಂತ್ರಸ್ತರೊಂದಿಗೆ ಸಭೆ ಜರುಗಿಸಲಾಗಿದೆ.<br><br>ಮುಂದುವರೆದು ದಿನಾಂಕ 26.08.2025 & 03.09.2026ರಂದು ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ UKP ಯೋಜನಾ ಪ್ರದೇಶದ ಸಚಿವರು, ಶಾಸಕರು, ರೈತರು ಹಾಗೂ ಸ್ಥಳೀಯ ಮುಖಂಡರೊಂದಿಗೆ ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿರುತ್ತದೆ.<br><br>ಅಲ್ಲದೇ, ದಿನಾಂಕ 10.09.2025ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸದರಿ ವಿಷಯದ ಕುರಿತು ಸುದೀರ್ಘವಾಗಿ ವಿವರವಾಗಿ ಚರ್ಚಿಸಿ, ಒಪ್ಪಂದದ ದರಗಳ ಪರಿಷ್ಕರಣೆಯ ಕುರಿತು ಅಭಿಪ್ರಾಯಗಳನ್ನು ಪಡೆದಿರುತ್ತಾರೆ.<br><br>ಒಟ್ಟಾರೆ, ಮೇಲಿನ ಸದರಿ ಸಭೆಗಳಲ್ಲಿ ಒಪ್ಪಂದದ ದರಗಳ ಪರಿಹಾರ ಮೊತ್ತವನ್ನು ಮುಳುಗಡೆಯಾಗುವ ಜಮೀನಿಗೆ ರೂ.40.00 ಲಕ್ಷದವರೆಗೆ ಮತ್ತು ಕಾಲುವೆ ಭೂಸ್ವಾಧೀನಕ್ಕಾಗಿ ತುಲನಾತ್ಮಕವಾಗಿ ಕಡಿಮೆ ದರಗಳನ್ನು ನಿಗದಿಪಡಿಸುವ ಬಗ್ಗೆ ರೈತರು ಮತ್ತು ಸ್ಥಳೀಯ ಮುಖಂಡರುಗಳು ಸಭೆಯಲ್ಲಿ ವಿನಂತಿಸಿಕೊಂಡಿರುತ್ತಾರೆ.<br><br>ಅದರಂತೆ, ದಿನಾಂಕ 16.09.2025ರ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯದಂತೆ, ದಿನಾಂಕ:09.10.2025ರ ಆದೇಶದಲ್ಲಿ ಮುಳುಗಡೆ ಜಮೀನಿನ ಎಕರೆಗೆ (a) ಖುಷ್ಕಿ ಭೂಮಿಗೆ (Dry Land) ರೂ.30.00 ಲಕ್ಷ (b) ತರಿ ಭೂಮಿಗೆ (WetLand) ರೂ.40.00 ಲಕ್ಷ ಮತ್ತು ಕಾಲುವೆ ಜಮೀನುಗಳ ಎಕರೆಗೆ (a) ಖುಷ್ಕಿ ಭೂಮಿಗೆ (Dry Land) ರೂ.25.00 ಲಕ್ಷ ಮತ್ತು (b) ತರಿ ಭೂಮಿಗೆ (WetLand) ರೂ.30.00 ಲಕ್ಷ ಒಪ್ಪಂದದ ಐತೀರ್ಪು ದರಗಳನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.<br><br>ರೈತರುಗಳು ಹಾಗೂ ಭೂಮಾಲೀಕರ ಕೋರಿಕೆಗೆ ಸ್ಪಂದಿಸಿ, ಜಮೀನಿಗೆ ಚಾಲ್ತಿಯಲ್ಲಿರುವ ದರಗಳನ್ನು ಪರಿಗಣಿಸಿ ಯುಕೆಪಿಯಲ್ಲಿ ಭೂಮಿ ಕಳೆದುಕೊಂಡ ರೈತ ಪರ್ಯಾಯವಾಗಿ ಜಮೀನು ಖರೀದಿಸಲು ಅನುಕೂಲವಾಗುವಂತೆ ಒಪ್ಪಂದದ ಐತೀರ್ಪು ದರ ನಿಗಧಿಪಡಿಸಿದೆ.</td></tr>
<tr><td>(ಆ)</td><td>ಕೈಗಾರಿಕೆ ಮತ್ತು ನಗರೀಕರಣದ (ಬಿಡದಿ ಟೌನ್‌ಶಿಪ್) ಯೋಜನೆಗಳಿಗೆ ಬಜೆಟ್‌ನಲ್ಲಿ ಹೆಚ್ಚಿನ ಆದ್ಯತೆ ನೀಡಿ, ರೈತರಿಗೆ ಗರಿಷ್ಠ ಪರಿಹಾರ ನೀಡುವ ಸರ್ಕಾರ, ಇಡೀ ರಾಜ್ಯಕ್ಕೆ ಅನ್ನ ನೀಡುವ ಬೃಹತ್ ನೀರಾವರಿ ಯೋಜನೆಗೆ (UKP) ಭೂಮಿ ನೀಡುವ ರೈತರ ವಿಷಯದಲ್ಲಿ ಏಕೆ ಈ ರೀತ್ಯಾ ನಿಲುವು ತಳೆದಿದೆ: ಇದು ಉತ್ತರ ಕರ್ನಾಟಕದ ರೈತರಿಗೆ ಮಾಡುತ್ತಿರುವ ಅನ್ಯಾಯವಲ್ಲವೇ:</td></tr>
<tr><td>(ಇ)</td><td>ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಗಳು ಶೀಘ್ರವಾಗಿ ಪೂರ್ಣಗೊಳ್ಳಬೇಕಾದರೆ ರೈತರು ಸಂತೋಷದಿಂದ ಭೂಮಿ ನೀಡಬೇಕು. ಸರ್ಕಾರ ನೀಡುತ್ತಿರುವ ಈ ಕಡಿಮೆ ದರದಿಂದಾಗಿ ರೈತರು ಭೂಮಿ ನೀಡಲು ಹಿಂಜರಿಯುತ್ತಿರುವುದು ಮತ್ತು ಇದರಿಂದ ಯೋಜನೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td></tr>
<tr><td>(ಈ)</td><td>ಬಿಡದಿ ಮಾದರಿಯಲ್ಲೇ ಕೃಷ್ಣಾ ಮೇಲ್ದಂಡೆ ಯೋಜನೆಯ ಸಂತ್ರಸ್ತ ರೈತರಿಗೂ ಕೇವಲ ಹಣದ ರೂಪದಲ್ಲಿ ಪರಿಹಾರ ನೀಡದೆ, ಪರ್ಯಾಯವಾಗಿ ಅಭಿವೃದ್ಧಿಪಡಿಸಿದ ವಾಣಿಜ್ಯ ಅಥವಾ ವಸತಿ ನಿವೇಶನಗಳನ್ನು (TDR/Land Pooling) ನೀಡುವ ಯೋಜನೆಯನ್ನು ಸರ್ಕಾರ ಏಕೆ ರೂಪಿಸಬಾರದು:</td></tr>
</table>

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಉ) | ರೂ.30-40 ಲಕ್ಷ ಹಣ ಪಡೆದ ರೈತರು ಮುಂದಿನ ದಿನಗಳಲ್ಲಿ ಜೀವನೋಪಾಯ ಕಳೆದುಕೊಂಡು ಬೀದಿಗೆ ಬೀಳುವ ಆತಂಕವಿದ್ದು, ಹೀಗಾಗಿ ಅವರ ಕುಟುಂಬದ ಕನಿಷ್ಠ ಒಬ್ಬ ಸದಸ್ಯನಿಗೆ ಸರ್ಕಾರಿ ಉದ್ಯೋಗ ಅಥವಾ ಶಾಶ್ವತ ಮಾಸಿಕ ಜೀವನಭತ್ಯೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ದಿನಾಂಕ 09.10.2025ರ ಆದೇಶದಲ್ಲಿ ನಿಗಧಿಪಡಿಸಿದ ಒಪ್ಪಂದದ ಐತೀರ್ಪು ದರಗಳಿಗೆ ಒಪ್ಪಿ ರೈತರು ಒಪ್ಪಿಗೆ ಐತೀರ್ಪಿನ ಮೂಲಕ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಒಪ್ಪಿಗೆ ನೀಡುತ್ತಿದ್ದಾರೆ.<br><br>ಈಗಾಗಲೇ 1736 ಎಕರೆ 10 ಗುಂಟೆಗೆ ಒಪ್ಪಂದದ ಐತೀರ್ಪು ರಚಿಸಿ ಪರಿಹಾರ ಪಾವತಿಸಲಾಗಿದೆ ಹಾಗೂ ನ್ಯಾಯಾಲಯದಲ್ಲಿನ ಪ್ರಕರಣಗಳನ್ನು ದಿನಾಂಕ 24.01.2026, 14.03.2026 ಹಾಗೂ 11.07.2026 ರಂದು ಜರುಗಿದ ಲೋಕ್-ಅದಾಲತ್ ನಲ್ಲಿ ಇತ್ಯರ್ಥಪಡಿಸಿಕೊಳ್ಳಲು ರೈತರುಗಳು 4,212 Joint Memo ಗಳು 3,345 ಎಕರೆಗೆ ರೂ.713.31 ಕೋಟಿ ಮೊತ್ತಕ್ಕೆ ಸ್ವೀಕೃತಗೊಂಡಿರುತ್ತವೆ. ಪರಿಹಾರ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.<br><br>ಇದಲ್ಲದೇ, ನ್ಯಾಯಾಲಯಗಳಲ್ಲಿನ ಪ್ರಕರಣಗಳನ್ನೂ ಸಹಾ ಸದರಿ ಒಪ್ಪಂದದ ಐತೀರ್ಪು ದರಗಳಲ್ಲಿ ಇತ್ಯರ್ಥಪಡಿಸಿಕೊಳ್ಳಲು ರೈತರುಗಳು ಮುಂದೆ ಬಂದಿರುತ್ತಾರೆ. ಈ ರೀತಿ ಯೋಜನಾ ಭಾಗದ ರೈತರು ಹಾಗೂ ಭೂಮಾಲೀಕರ ಸ್ಪಂದನೆಯನ್ನು ಕಾಣಬಹುದಾಗಿದೆ. |

ಸಂಖ್ಯೆ:ಜಸಂಇ 75 ಡಬ್ಲ್ಯೂಬಿಎಂ 2026

(ಎನ್. ಚಲುವರಾಯಸ್ವಾಮಿ)
ಜಲಸಂಪನ್ಮೂಲ ಸಚಿವರು